

ಮಲೆನಾಡ ಹಳೆಯ ತೋಟಗಳಲ್ಲಿ ದೋಟಿ ಕಾರ್ಮಿಕರ ಕಸರತ್ತು

## ತಂತ್ರಜ್ಞಾನದ ನಿರೀಕ್ಷೆಯಲ್ಲಿ...

ಈ ಹಿಂದೆ ಕೃಷಿಗೆ ಜ್ಞಾನದ ಅಗತ್ಯವಿದ್ದರೂ ವಿಜ್ಞಾನದ ಅಗತ್ಯವಿರಲಿಲ್ಲ. ಆದರೆ ಈಗ ಪರಿಸ್ಥಿತಿ ಹಾಗಿಲ್ಲ. ಕೃಷಿಕನಿಗೆ ಲಾಭ–ಹಾನಿಯ ಲೆಕ್ಕಾಚಾರ, ಬಿಸಿಲು, ಮಳೆಗಳ ಬಗ್ಗೆ ಅರಿವಿರಬೇಕು. ನೀರಾವರಿ, ಜವಳು ಭೂಮಿಯ ಪರಿಕಲ್ಪನೆ ಬೇಕು. ಮಣ್ಣು, ಪೋಷಕಾಂಶಗಳ ತಿಳಿವಳಿಕೆ ಬೇಕು. ಕೀಟನಾಶಕಗಳ ಬಗ್ಗೆ, ಅದರ ಪರಿಣಾಮಗಳ ಬಗ್ಗೆ ತಿಳಿದಿರಬೇಕು. ಅದನ್ನು ಯಾವ ಸಮಯದಲ್ಲಿ ನೀಡಬೇಕು ಎಂಬ ಜ್ಞಾನವೂ ಬೇಕು. ಇದನ್ನು ಅಡಿಕೆ ಕ್ಷೇತ್ರ ಬಯಸುತ್ತಿದೆ. ಕಚೇರಿ ಕೆಲಸದಂತೆ ಈ ಕೆಲಸವು ಕೂಡ ಕಾಲಕಾಲಕ್ಕೆ ನಡೆದರೆ ಮಾತ್ರ ಯಶಸ್ವಿಯಾಗಬಹುದು. ಇಷ್ಟು ವರ್ಷ ತೋಟದ ಮಾಲೀಕ ತೋಟಕ್ಕೆ ಹೋಗಿ ಅಡಿಕೆ ಕೊನೆ ನೋಡಿ ಬರುತ್ತಿದ್ದ ಕಾಲವಿತ್ತು. ಈಗ ಸ್ವತಃ ಅಡಿಕೆ ಮರಗಳ ಹೆಡ (ಎಲೆ) ನೋಡುವಂತಾಗಿದೆ. ಎಲೆಚುಕ್ಕಿ ರೋಗ ಬಾಧೆ ತೀವ್ರವಾಗುತ್ತಿರುವುದು ಇದಕ್ಕೆ ಕಾರಣವಾಗಿದೆ' ಎನ್ನುತ್ತಾರೆ ಕ್ಷೇತ್ರ ತಜ್ಞರು.



ಬೇಯಿಸಿದ ಅಡಿಕೆಯನ್ನು ಚೈನ್ ಪುಲ್ಲಿ ಮೂಲಕ ಅಟ್ಟಕ್ಕೆ ಎತ್ತಿ ಹಾಕುತ್ತಿರುವ ಕಾರ್ಮಿಕರು



ಸುಲಿದ ಹಸಿ ಅಡಿಕೆಯನ್ನು ಸಾಂಪ್ರದಾಯಿಕ ಪದ್ಧತಿಯಲ್ಲಿ ಬೇಯಿಸುತ್ತಿರುವುದು

ಸಿಂಪಡಿಸುವ ವ್ಯವಸ್ಥೆಯನ್ನೂ ಒಳಗೊಂಡಿವೆ. ಆದರೆ ಇವು ರೈತಸ್ನೇಹಿ ಮಾದರಿಗಳಾಗಿಲ್ಲ' ಎನ್ನುತ್ತಾರೆ ಅವರು.

### ಸರಳೀಕೃತ ವ್ಯವಸ್ಥೆ

'ಆರ್ಥಿಕವಾಗಿ ಸಬಲರಲ್ಲದ ಅಡಿಕೆ ಬೆಳೆಗಾರರು ಕೂಡ ಇಂದು ಸುಲಭ ವ್ಯವಸ್ಥೆಗೆ ಆದ್ಯತೆ ನೀಡುತ್ತಿದ್ದಾರೆ. ಈ ಹಿಂದೆ ಅಡಿಕೆ ಕೃಷಿಕರ ಮನೆಯೆದುರು ಅಟ್ಟ ಕಡ್ಡಾಯವಾಗಿತ್ತು. ಆದರೆ ಕೂಲಿ ಸಮಸ್ಯೆಯ ಕಾರಣ ಇಂದು ಅಟ್ಟ ಹಾಕುವ ಪದ್ಧತಿ ದೂರವಾಗುತ್ತಿದೆ. ಎಲ್ಲರೂ ಅಂಗಳದಲ್ಲಿಯೇ ಅಡಿಕೆ ಒಣಗಿಸುತ್ತಾರೆ. ಊರಲ್ಲಿ ಒಗ್ಗಟ್ಟು ಇದ್ದರೆ ಸಾಮೂಹಿಕವಾಗಿ ಕಣಗಳಲ್ಲಿ ನಾಲ್ಕಾರು ಬೆಳೆಗಾರರು ಫಸಲು ಒಣಗಿಸುತ್ತಾರೆ. ಇದರ ಜತೆ ತಲೆ ಹೊರೆ ಹೊರುವುದು ಕಷ್ಟ ಎಂಬ ಕಾರಣಕ್ಕೆ ಸಣ್ಣ ವಾಹನ ಸಂಚರಿಸಲು ಪೂರಕವಾಗಿ ತೋಟದಲ್ಲಿ ಓಡಾಡಲು ರಸ್ತೆ ನಿರ್ಮಾಣ ಮಾಡಿಕೊಂಡಿದ್ದಾರೆ' ಎನ್ನುತ್ತಾರೆ ಬನವಾಸಿಯ ರೈತ ಮಹಂತೇಶ ಗೌಡ.

'ಬಯಲುಸೀಮೆಗೆ ಹೋಲಿಸಿದರೆ ಮಲೆನಾಡ ಭಾಗದಲ್ಲಿ ಅಡಿಕೆ ಕ್ಷೇತ್ರ ವಿಸ್ತರಣೆಗೆ ಸೀಮಿತ ಅವಕಾಶವಿದೆ. ಮಲೆನಾಡ ಭಾಗದಲ್ಲಿ ತುಂಡು ಭೂಮಿ, ಅರ್ಧ ಎಕರೆ, ಗುಂಟೆ ತೋಟ ಇಟ್ಟು ಜೀವನ ಮಾಡುವವರು ಹೆಚ್ಚಿದ್ದಾರೆ. ಬೇಸಿಗೆಯಲ್ಲಿ ನಿರ್ವಹಣೆ, ನೈಸರ್ಗಿಕ ಗೊಬ್ಬರ ಬಳಕೆ, ಈ ಹಿಂದೆ ಕರಡ, ಕೊಟ್ಟೆ ಕಟ್ಟುವ ವಿಧಾನದಿಂದ ಸ್ಪ್ರೇ ಮಾಡುವ ವಿಧಾನ ಬಂತು, ನಂತರ ಪ್ಲಾಸ್ಟಿಕ್ ಕೊಟ್ಟೆ ಕಟ್ಟುವ ವಿಧಾನ ಬಂತು. ತಾಂತ್ರಿಕತೆಯಲ್ಲಿ ಬದಲಾವಣೆ ಆಗುತ್ತ ಕೌಶಲಕ್ಕೆ ಆದ್ಯತೆ ಸಿಕ್ಕಿತು. ಯುವಕರ ವಲಸೆ ನಡುವೆಯೂ ಕೃಷಿ ಕಾರ್ಯ ನಿರಾತಂಕವಾಗಿ ಸಾಗಲು ಬಯಲು ಸೀಮೆ ಕಾರ್ಮಿಕರ ಬಳಕೆ, ಸಹಕಾರಿ ಸಂಘಗಳಿಂದ ವಿವಿಧ ಹಂತದ ನಿರ್ವಹಣೆ, ಕೊಳೆ ಅಡಿಕೆ, ಹಸಿ ಅಡಿಕೆ, ಸಿಪ್ಪೆ ಚಾಲಿ ಮಾರಲು ಮಾರುಕಟ್ಟೆ ವ್ಯವಸ್ಥೆ, ಮನೆ ಬಾಗಿಲಿಗೆ ವಾಹನಗಳ ವ್ಯವಸ್ಥೆಗಳು ಲಭ್ಯವಾಗಿವೆ. ಹಲವು ಪ್ರಯೋಗ, ಸೌಲಭ್ಯ ಕಲ್ಪಿಸಿರುವ ಕಾರಣ ಅಡಿಕೆ ಕೃಷಿ ದಶಕಗಳ ಹಿಂದಿನಂತೆ ಸಮಸ್ಯೆಯಾಗಿ ಉಳಿದಿಲ್ಲ' ಎನ್ನುತ್ತಾರೆ ಅವರು.

### ಅಡಿಕೆ ಕೃಷಿ- ಪ್ರಯೋಗ ಅಗತ್ಯ

'ಅಡಿಕೆ ತೋಟಗಳಲ್ಲಿನ ಮರಗಳ ಜತೆಗೆ ಇಳುವರಿಯನ್ನು ನಿಶ್ಶಬ್ದವಾಗಿ ಕೊಲ್ಲುತ್ತಿರುವ ರೋಗಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗುತ್ತಿವೆ. ಎಲೆಚುಕ್ಕಿ, ಹಳದಿ ರೋಗಗಳ ಜತೆಗೆ ಅತಿಯಾದ ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಮಣ್ಣಿನ ಅವನತಿಯಾಗುತ್ತಿದೆ. ಬಯಲುಸೀಮೆಯ ಅಡಿಕೆ ತೋಟಗಳಲ್ಲಿ ಭಾಗಶಃ ಕಳೆ ನಿಯಂತ್ರಣಕ್ಕೆ